ಕಾನೂನು ಪದವಿ ಓದಿ, ನಂತರ ಪತ್ರಕರ್ತರಾಗಿ ಗುರುತಿಸಿಕೊಂಡಿರುವ ಬಿ.ಎನ್. ಮಲ್ಲೇಶ್ ನಿರಂತರ ಸಾಹಿತ್ಯ ಕೃಷಿಯಲ್ಲಿ ತೊಡಗಿರುವವರು. ಕಥೆ, ಕವನ ಮತ್ತು ವಿಡಂಬನಾ ಬರಹಗಳ ಮೂಲಕ ಕನ್ನಡದ ಓದುಗರಿಗೆ ಪರಿಚಿತರು. ಅವರ ಹುಟ್ಟೂರು ತುಮಕೂರು. ದಾವಣಗೆರೆ ಅವರ ಪ್ರಸ್ತುತ ಕರ್ಮಭೂಮಿ. 'ಬೇರು ಒಣಗಿದೆ', 'ಪ್ರೀತಿ ಮತ್ತು ಟ್ರ್ಯಾಕುಗಳ ಮೇಲೆ ಹುಣ್ಣಿಮೆ' ಅವರ ಕೃತಿಗಳು.

ಕೂಡುವಲ್ಲಿ ಒಂದು ಫಾರಂ ಕೋಳಿ ಅಂಗಡಿ ಇಡ್ತೇನಿ ಅಂತ ಬಂದಿದ್ದ ಖಾಸೀಮ. 'ಈಗಿನ್ನೂ ನಿಖಾ ಮಾಡ್ಕಂಡೇನಿ, ಸ್ವಂತಕ್ಕೆ ಏನರೆ ದುಡಿಮಿ ಮಾಡ್ತೀನಿ' ಅಂದಿದ್ದ. 'ಊರ ಹೊರಗೆ ತಾನೆ, ಮಾಡ್ಕೋ ಹೋಗು' ಅಂದಿದ್ದರು ಶಂಕರಪ್ಪ.

ಸುರುವಿಗೆ ಸಣ್ಣದೊಂದು ಶೆಡ್ ಇಟುಗೊಂಡು ಕೋಳಿ ವ್ಯಾಪಾರಕ್ಕೆ ಕೈ ಹಚ್ಚಿದ ಖಾಸೀಮ, ತಿಂಗಳೊಪ್ಪತ್ತು ಕಳಿಯೋ ಹೊತ್ತಿಗೆ ತನ್ನ ಹೇಂಣ್ತಿ ಹುಸೇನವ್ವಳನ್ನೂ ಕರಕೊಂಡು ಬಂದ. ಕೋಳಿ ಅಂಗಡಿ ಹಿಂದಗಡಿಗೆ ಸಣ್ಣ ನೆರಕಿ ಮನಿ ಕಟ್ಟಿ ಛಲೋತನ ಸಂಸಾರನೂ ಆರಂಭಿಸಿದ್ದ.

ಬಾಯಿ ತಗದ್ರೆ ಸಾಕು 'ಅಪ್ಪಾರೆ' ಅಂತ ಬರ್ತಿದ್ದವ ಕೋಳಿ ಅಂಗಡಿ ಜತಿಗೆ ಹೊಲಮನಿ ಮರ್ರ್‍ದೋದು, ಕೊಡ್ಡೋದು, ಮಾವಿನ ಮರ ಗುತ್ತಿಗೆ ಹಿಡಿಯೋದು, ಮರಮುಟ್ಟು ಕೊಯ್ಯೋದು... ಹಿಂಗ ಎಲ್ಲ ಕಸುಬಲ್ಲೂ ಸೈ ಅನಿಸಿಕೊಂಡ. ಒಮ್ಮೊಮ್ಮಿ ಜಾಸ್ತಿ ರೊಕ್ಕ ಸಿಕ್ಕಾಗ 'ಅಪ್ಪಾರ ಈ ರೊಕ್ಕ ನಿಮ್ಮತ್ರ ಇಟುಗೋರಿ, ನಾ ಬೇಕಾದಾಗ ಇಸ್ಕೋತೀನಿ ಅಂತಿದ್ದ. ಬಾಯಿ ಮಾತ್ನಾಗೇ ಎಲ್ಲ ವ್ಯವಾರ. ಅವ ಕೂಡಿಸಿಕೊಟ್ಟ ರೊಕ್ಕ ಹೆಂಗಿರ್ತಿತ್ತೋ ಹಂಗೇ ಅವ ಕೇಳಿದಾಗ ವಾಪಾಸ್ ಕೊಡ್ತಿದ್ದರು ಶಂಕರಪ್ಪ. ಹಂಗೆಲ್ಲ ರೊಕ್ಕ ಇಸ್ಕೋಬ್ಯಾಡ್ರಿ, ಅದು ಛಲೋ ಅಲ್ಲ ಅಂತ ಹೇಂಣ್ತಿ ಗಂಗವ್ವ ಬಾಳ ಸಲ ಹೇಳಿದ್ದೂ ಐತಿ.

ಆದರೆ ಖಾಸೀಮನ ನಂಬಿಕಿ ಮಾತು ಪದೇ ಪದೇ ಶಂಕರಪ್ಪರನ್ನು ಕಟ್ಟಿ ಹಾಕ್ತಿತ್ತು. 'ಅಪ್ಪಾರೆ, ನಾ ಬಂದು ಕೇಳಿದಾಗ ತಟಗೂ ಯೋಚಿಸ್ದಂಗೆ ನನ್ನ ದುಡಿಮಿಗೆ ದಾರಿ ತೋರಿಸ್ಸೋರು ನೀವು. ನಿಮ್ ಮ್ಯಾಲ ಅನುಮಾನ ಪಟ್ರೆ ನಾ ಮನಶ್ಯಾ ಆಗ್ತೀನಾ' ಅಂತಿದ್ದ.

ಚೊಚ್ಚಿಲ ಬಸುರಿ ಹುಸೇನವ್ವ ಸಾವು- ಬದುಕಿನ ನಡುವಿ ಒದ್ದಾಡುವಾಗ ಸೂಲಗಿತ್ತಿ ಕೂಡ ಗಂಗವ್ವ ರಾತ್ರಿ ಪೂರಾ ಜತಿಯಲ್ಲಿದ್ದು ನೋಡಿಕೊಂಡಿದ್ದಳು. ಹೆಣ್ಣುಕೂಸು ಹುಟ್ಟುವಾಗಲೇ ಸತ್ತಿತ್ತು. ಅದಾದ ಮೇಲೆ ಮೂರು ಹೆರಿಗೇನಲ್ಲೂ ಅದೇ ಕತಿ. ಹುಟ್ಟಿದ ಕೂಸು ಒಂದೂ ಕಣ್ಣು ಬಿಡಲಿಲ್ಲ. ಖಾಸೀಮ, ಹುಸೇನವ್ವ ಪೀರಲದೇವರಿಗೆ ಬೇಡಿಕೊಂಡರೆ ಗಂಗವ್ವ ತನ್ನ ಮನಿ ದೇವರಿಗೆ ಹರಕಿ ಕಟ್ಟಿಕೊಂಡಿದ್ದಳು.

ಹುಸೇನವ್ವ ಮತ್ತೆ ಬಸುರಿಯಾದಾಗ ಶಂಕರಪ್ಪ ಖಾಸೀಮನನ್ನು ಕರೆದು, 'ಈ ಸಲ ದೊಡ್ಡಾಸ್ಪತ್ರಿಗೆ ಒಯ್ಯಿ, ಊರಾಗೆ ಹೆರಿಗೆ ಬ್ಯಾಡ' ಅಂದಿದ್ದರು. ಖಾಸೀಮ ತಲೆಯಾಡಿಸಿದ್ದ. ತಮ್ಮ ಪರಿಚಯದ ಡಾಕ್ಟರಿಗೆ ಶಂಕರಪ್ಪ ಹೇಳಿ, ಅಲ್ಲಿಗೆ ಹುಸೇನವ್ವ ಹೋದ ಮೇಲೆ ಹುಟ್ಟಿದವನೇ ಈ ಶಫಿ ಅನ್ನೋ ಉಡಾಳ. ಕೊನಿಗೆ ಹುಟ್ಟಿದವಳು ಹಸೀನಾ. ಅವಳನ್ನು ಬಳ್ಳಾರಿ ಹುಡುಗನಿಗೆ ಮದುವಿ ಮಾಡಿಕೊಟ್ಟಿದ್ದ ಖಾಸೀಮ.

ಖಾಸೀಮ ಕೂಡಿಸಿಟ್ಟ ರೂಪಾಯಿ ಎಲ್ಲ ಜಮಾ ಮಾಡಿ ಶಂಕರಪ್ಪ ಅವನಿಗೆ ಅವನ ಕೋಳಿ ಅಂಗಡಿ ಪಕ್ಕದಲ್ಲೇ ಸೋವಿ ರೇಟಿಗೆ ಎರಡೆಕರಿ ಹದಿನಾರು ಗುಂಟಿ ಜಮೀನು ಕೊಡಿಸಿದ್ದರು. ಅದನ್ನ ಖಾಸೀಮ ಹುಸೇನವ್ವನ ಹೆಸರಿಗೇ ಮಾಡಿಸಿದ್ದ. 'ಹೊಲ ಮಾಡು, ಬೆಳಿ ತೆಗಿ, ಒಂದ್ಕಡಿ ನೆಲಿ ನಿಲ್ಲು' ಅಂದ್ರೆ ಗಡ್ಡ ಕೆರೆದುಕೊಂಡು 'ಆಗ್ಲಿ ಅಪ್ಪಾರೇ' ಅನ್ನುತ್ತಿದ್ದನೇ ಹೊರತು ಕೊನಿಗೂ ಖಾಸೀಮ ಹೊಲನ ಬೀಳು ಬಿಟ್ಟು ಊರೂರು ತಿರುಗಿ ದುಡಿಮಿ

